**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 266/2024

ಪಿ.ಡಬ್ಲ್ಯೂ : 2 ಸಿ.ಡಬ್ಲ್ಯೂ 5

| | |
|---|---|
| ಸಾಕ್ಷಿದಾರರ ಹೆಸರು | : ಭೀಮಾಶಂಕರ ಸುತಾರ |
| ತಂದೆಯ ಹೆಸರು | : ರಾಮಚಂದ್ರ |
| ವಯಸ್ಸು | : 35 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ನಿವಾಳಖೇಡ |
| ಸಮಯ | : 3.35 |

<u>ಸಾಕ್ಷಿಗೆ ಇಂದು ದಿನಾಂಕಃ 17-07-2026 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

ಸಾಕ್ಷಿಗೆ ತಮ್ಮ ಸಹಿ ಇರುವ ಎರಡು ದಾಖಲಾತಿಗಳನ್ನು ನೋಡಿ ಗುರುತಿಸಿದ್ದು ಘಟನಾ ಜಾಗೆ ಹಾಗೂ ಜಪ್ತಿ ಪಂಚನಾಮೆಗಳಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಪಿ 5 ಎ ಮತ್ತು 6 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ. ನಿಪಿ 5 ಮತ್ತು 6 ಕ್ಕೆ ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**<u>(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).</u>**

**<u>ಪಾಟೀಸವಾಲುಃ ಎ.ಪಿ.ಪಿ. ರವರಿಂದಃ</u>**

ದಿನಾಂಕ 19–10–2023 ರಂದು ನನ್ನನ್ನು ಮತ್ತು ಚಾ ಸಾ 4 ರವರನ್ನು ನಿಪಿ 5 ಮತ್ತು 6 ರಲ್ಲಿ ನಮೂದು ಮಾಡಿದಂತೆ ಘಟನಾ ಜಾಗೆ ಪಂಚನಾಮೆ ಹಾಗೂ ಈಗ ನೋಡುತ್ತಿರುವ ವಾಹನಗಳ ಜಪ್ತಿಗಾಗಿ ಕರೆದು ನಮ್ಮ ಸಮಕ್ಷಮ ಚಾ ಸಾ 6 ರವರು ತೋರಿಸಿದಂತೆ ನಿಪಿ 5 ರಂತೆ ಘಟನಾ ಜಗೆ ಪಂಚನಾಮೆ ಮದ್ಯಾಹ್ನ 1 ರಿಂದ 2 ರವರೆಗೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಈಗ ನೋಡುತ್ತಿರುವ ಫೋಟೊವನ್ನು ತೆಗೆದಿದ್ದು ಅದರಂತೆ ಅದೇ ದಿನ ವಾಹನಗಳನ್ನು ನನ್ನ ಮತ್ತು ಚಾ ಸಾ 4 ರವರ ಸಮಕ್ಷಮ ನಿಪಿ 6 ರಂತೆ 3 ರಿಂದ 3.45 ರವರೆಗೆ ಜಪ್ತಿ ಮಾಡಿಕೊಂಡ ಅಂಶಗಳನ್ನು ಓದಿ ಹೇಳಿ ಸಹಿ ಪಡೆದಿರುತ್ತಾರೆ ಎಂದರೆ ಸಹಿ ಪಡೆದಿದ್ದು ನಿಜ ಆದರೆ ಯಾವ ಕಾರಣಕ್ಕೆ ಪಡೆದಿರುತ್ತಾರೆ ಗೊತ್ತಿಲ್ಲ. ನನಗೆ ನಿಪಿ 5 ಮತ್ತು 6 ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರು ಯಾವುದೇ ಪಾಟೀಸವಾಲು ಇಲ್ಲ ಎಂದಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.